**ಪಿ. ಡಬ್ಲ್ಯೂ: 1**

**( ಇಂದು ದಿಃ 19/12/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಆರೋಪಿ ಪರ ಶ್ರೀ ಪಿ ಜಿ ಎನ್ ವಕೀಲರಿಂದ,**

ಆರೋಪಿಗೆ ಸಾಲ ನೀಡುವಾಗ ನಾನು ಪಿರ್ಯಾದಿ ಸಂಸ್ಥೆಯಲ್ಲಿ ಮ್ಯಾನೇಜರ್ ಆಗಿದ್ದೇನು. ನಮ್ಮ ಸಂಸ್ಥೆಯಲ್ಲಿ ಆರೋಪಿಯು ಈ ಮೊದಲು 2 ಬಾರಿ ಪಡೆದಿದ್ದರು. ಆರೋೀಪಿಯು 2019 ರಲ್ಲಿ ಒಂದು ಲಕ್ಷ ವೈಯಕ್ತಿಕ ಸಾಲಕ್ಕಾಗಿ ನಮ್ಮ ಸಂಸ್ಥೆಗೆ ಬಂದಿದ್ದರು. ನಮ್ಮ ಸಂಸ್ಥೆಯಲ್ಲಿ ನಿರ್ದೇಶಕರ ಮಂಡಳಿ ಇದೆ. ಯಾವುದೇ ಸಾಲವನ್ನು ನಿರ್ದೇಶಕರ ಮಂಡಳಿಯ ಮಂಜೂರಿಯ ಮೇರೆಗೆ ನೀಡಲಾಗುತ್ತದೆ. ವೈಯಕ್ತಿಕ ಸಾಲಕ್ಕೆ ನಾವು 2 ಜನ ಜಾಮೀನುದಾರರು ಮತ್ತು ಬಾಂಡನ್ನುತೆಗೆದುಕೊಳ್ಳುತ್ತೇವೆ. ಸಾಲದ ಅರ್ಜಿಯಲ್ಲಿ ನಿರ್ದೇಶಕರ ಮಂಡಳಿಯ ಒಪ್ಪಿಗೆ ಪಡೆದ ಬಗ್ಗೆ ಬರೆದಿರುತ್ತೇವೆ. ಮಂಜೂರಾತಿ ಪತ್ರಕ್ಕೆ ಅಧ್ಯಕ್ಷರು, ಮತ್ತು ಕಾರ್ಯದರ್ಶಿಯ ಸಹಿ ಇರುತ್ತದೆ. ನಿಪಿ-6 ಸಾಲದ ಅರ್ಜಿಗೆ ಅಧ್ಯಕ್ಷರ ಸಹಿ ಇದೆ. ಅವರು ಸಹಿ ಹಾಕುವ ಮೊದಲು 2 ಷರಾ ಬರೆದಿರುತ್ತಾರೆ. ಒಂದು ಷರಾದಲ್ಲಿ ಚೆಕ್ಕು ಮೂಲಕ ಸಾಲ ವಿತರಿಸತಕ್ಕದ್ದು ಎಂದು ನಮೂದಿಸಿರುತ್ತಾರೆ. ಇನ್ನೊಂದು ಷರಾದಲ್ಲಿ ಈ ಸಾಲದ ಭದ್ರತೆಗಾಗಿ 2 ಚೆಕ್ಕು ಪಡೆಯಬೇಕೆಂದು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ಭದ್ರತೆಗಾಗಿ ನೀಡಿದ ಚೆಕ್ಕನ್ನು ದುರುಪಯೋಗಪಡಿಸಿ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಅರೋಪಿಗೆ ಸಾಲವನ್ನುನೀಡಿದಾಗ ಸಾಲದ ಮರುಪಾವತಿಗಾಗಿ ದಿಃ 22.10.2019 ರಂದು ನಮ್ಮ ಬ್ಯಾಂಕಿಗೆ ಬಂದು ಸಿಂಡಿಕೇಟ್ ಬ್ಯಾಂಕಿನ ಚೆಕ್ಕನ್ನು ನೀಡಿದ್ದಾರೆ . ಸಿಂಡಿಕೇಟ್ ಬ್ಯಾಂಕ್ ಕೆನರಾಬ್ಯಾಂಕಿನೊಂದಿಗೆ ಯಾವ ವರ್ಷದಲ್ಲಿ ವಿಲಿನಗೊಂಡಿದೆ ಎಂದು ನನಗೆ ಮಾಹಿತಿ ಇಲ್ಲ. 2020 ರಲ್ಲಿ ಸಿಂಡಿಕೇಟ ಬ್ಯಾಂಕ್ ವಿಲೀನಗೊಂಡ ಕಾರಣ ಸದರಿ ಪ್ರಕರದಲ್ಲಿರುವ ಚೆಕ್ಕು ಚಾಲ್ತಿಯಲ್ಲಿರಲಿಲ್ಲ ಎಂದರೆ ಸರಿಯಲ್ಲ.

**ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದು ನೀಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**